ಶ್ರೀ ಜಗದೀಶ್ ಶೆಟ್ಟರ್ : ಸ್ಪೆಸಿಫಿಕ್ಕಾಗಿ ಇವರಿಗೆ ಫ್ಯೂಚರ್ ಪ್ಲಾನಿಂಗ್ ಇಲ್ಲ. ಜಿಲ್ಲಾಡಳಿತಕ್ಕೂ ಕೂಡ ಏನು ಮಾಡಬೇಕೆಂಬ ಬಗ್ಗೆ ಡೈರೆಕ್ಷನ್ಸ್ ಇಲ್ಲ. ಅಧಿಕಾರಿಗಳ ಮೇಲೆ ಇವರಿಗೆ ಹಿಡಿತ ಇಲ್ಲ. ಇಂತಹ ಪರಿಸ್ಥಿತಿ ಇವತ್ತು ಇಲ್ಲಿ ನಿರ್ಮಾಣವಾಗಿದೆ. ರೈತರ ಸಾಲದ ಮೇಲಿನ ಬಡ್ಡಿ ಮನ್ನಾ ಮಾಡಿ ಎಂದು ನಾವು ಕೇಳಿದರೆ ಸರ್ಕಾರ ಅದಕ್ಕೆ ತಾವು ವಿಚಾರ ಮಾಡುತ್ತೇನೆ ಎಂದು ಹೇಳುತ್ತದೆ. ಆದರೆ ಅಬ್ಕಾರಿ ಬಾಬ್ತಿನಲ್ಲಿ ಸರ್ಕಾರ 260 ಕೋಟಿ ರೂಪಾಯಿಗಳನ್ನು ಧಾರಾಳವಾಗಿ ಮನ್ನಾ ಮಾಡುತ್ತದೆ. ರೈತರ ಬಡ್ಡಿ ಮನ್ನಾ ಮಾಡಿ ಎಂದರೆ ಈ ಸರ್ಕಾರ ಮಾಡುವುದಿಲ್ಲ. ಸಾಲದ ಮರುಪಾವತಿ ಅವಧಿ ಮುಗಿಯುತ್ತಿದ್ದು, ಬ್ಯಾಂಕ್‌ನವರು ಜಪ್ತಿ ಮಾಡುವ ಸಲುವಾಗಿ ರೈತರ ಮನೆ ಮನೆಗೆ ಓಡಾಡುತ್ತಿದ್ದಾರೆ. ರೈತರು ಇವತ್ತು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಇನ್ನೂ ಆತ್ಮಹತ್ಯೆ ಪ್ರಕರಣಗಳು ಜಾಸ್ತಿಯಾಗುತ್ತಿವೆ ಸಾಲದ ಮರುಪಾವತಿ ಮಾಡುವ ಅವಧಿ ವಿಸ್ತರಣೆ ಮಾಡಿ ಎಂದು ಕೇಳಿದರೂ ಕೂಡ ಅದನ್ನು ವಿಸ್ತರಣೆ ಮಾಡಲು ಈ ಸರ್ಕಾರಕ್ಕೆ ಆಗುತ್ತಿಲ್ಲ.

ಶ್ರೀ ಎಸ್. ಎಂ. ಕೃಷ್ಣ : ಆ ಬಗ್ಗೆ ಚರ್ಚೆ ಎಲ್ಲಾ ಆಗಿದೆ. ಅದಕ್ಕೆಲ್ಲಾ ಉತ್ತರವೂ ಕೂಡ ನಿಮಗೆ ಸಿಕ್ಕಿದೆ. ನೀವು ಹೇಳಿದ್ದನ್ನೇ ಹೇಳಿದರೆ ನಾವೂ ಹೇಳಿದ್ದನ್ನೇ ಹೇಳಬೇಕಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ರೈತರ ಬಗ್ಗೆ ಈ ಸರ್ಕಾರಕ್ಕೆ ಕಾಳಜಿ ಇಲ್ಲ. ಈ ಸರ್ಕಾರದ ರೈತ ವಿರೋಧಿ ನೀತಿಯನ್ನು ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಜಿ. ಜೆ. ಪಿ. ಸದಸ್ಯರು ಸದನದಿಂದ ಸಭಾತ್ಯಾಗ ಮಾಡಿದರು)

ಶ್ರೀ ಎಸ್. ಎಂ. ಕೃಷ್ಣ : ಯಾರು ಈಗ ತಾನೇ ವಾಕೌಟ್ ಮಾಡಿದರೋ ಅವರಿಗೆ ರೈತರ ಬಗ್ಗೆ ಕೊಂಚವೂ ಕೂಡ ಕಾಳಜಿ ಇಲ್ಲ. ಪರ್ತಕರ ಬಗ್ಗೆ ಮಾತ್ರ ಅವರಿಗೆ ಕಾಳಜಿ ಇದೆಯೇ ಹೊರತು ರೈತರ ಬಗ್ಗೆ ಅವರ ಕಾಳಜಿ ಇಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯಾ : ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಸಿಟ್ಟು ಮಾಡಿಕೊಳ್ಳತಕ್ಕಂಥ ಅವಶ್ಯಕತೆ ಇಲ್ಲ. ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಇದೆಲ್ಲಾ ನಡೆಯುತ್ತದೆ.

ಶ್ರೀ ಎಸ್. ಎಂ. ಕೃಷ್ಣ : ನಾಲ್ಕು ದಿವಸಗಳ ಕಾಲ ಇಲ್ಲಿ ಚರ್ಚೆ ಮಾಡಿ ಮಾನ್ಯ ವಿರೋಧ ಪಕ್ಷದ ನಾಯಕರು ಗೋಡೌನ್ ಸಿಕ್ಕಲಿಲ್ಲ ಎಂದು, ಸರ್ಕಾರ ನೆಪ ಹೂಡಿದೆ ಎಂದು ಹೇಳಿದರು. ಯಾರಾದರೂ ಅಧಿಕೃತ ವಿರೋಧ ಪಕ್ಷದ ನಾಯಕರು ಹೇಳತಕ್ಕಂಥ ಮಾತೇ ಅದು.

ಶ್ರೀ ಪಿ. ಜಿ. ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೇ, ಸರ್ಕಾರದ ಉತ್ತರದಿಂದ ನಮಗೆ ಸಮಾಧಾನ ಇಲ್ಲ. ನಾನು ಬಹಳ ಪ್ರಾಮಾಣಿಕವಾಗಿ ಈ ಮಾತನ್ನು ಹೇಳುತ್ತಿದ್ದೇನೆ. ಖಂಡಿತವಾಗಿಯೂ ಮನಸ್ಸು ಮಾಡಿದ್ದರೆ ರೈತರ ಸಾಲದ ಮೇಲೆ ಇದ್ದಂತಹ ಬಡ್ಡಿಯನ್ನು ನೀವು ರದ್ದು ಮಾಡಬಹುದು. ಕಳೆದ ಒಂದು ವರ್ಷದಿಂದ ನಾವು ಈ ಬೇಡಿಕೆಯನ್ನು ಸರ್ಕಾರದ ಮುಂದೆ ಇಟ್ಟಿದ್ದೇವೆ. ನಮ್ಮ ಬೇಡಿಕೆಗೆ ಸರ್ಕಾರ ಒಪ್ಪಿಗೆ ಕೊಡುತ್ತಿಲ್ಲ. ಇದನ್ನು ಪ್ರತಿಭಟನೆ ಮಾಡಿ ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಸಿಂಧ್ಯಾರವರೇ, ತಾವು ಸಭಾತ್ಯಾಗ ಮಾಡುವುದಕ್ಕಿಂತ ಮುಂಚೆ ಒಂದು ಮಾತನ್ನು ಹೇಳುತ್ತೇನೆ, ಕೇಳಿ ಬಿಡಿ. ಈಗ ತಾನೇ ಮಾನ್ಯ ಮುಖ್ಯಮಂತ್ರಿಯವರು